.

CC.283/2019 **CW-7, PW-10**

**ದಿನಾಂಕ:16.11.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು .**

ಪಾಟೀ ಸವಾಲು:- ಆರೋಪಿ ನಂ.**2,7** ಮತ್ತು **11** ಪರ ಶ್ರೀ ಎ.ಬಿ.ಎಂ.ವಕೀಲರಿಂದ

ಪೋಲಿಸರು ನನ್ನನ್ನು ದಾಖಲೆಗಳನ್ನು ಕೊಡುವಂತೆ ನೋಟಿಸು ಕೊಟ್ಟು ಕೇಳಿರುವುದಿಲ್ಲ . ದೂರನ್ನು ನಾನು ನೋಡಿರುವುದಿಲ್ಲ , ಆದರೆ ನನಗೆ ಮೇಲಾಧಿಕಾರಿಗಳಿಂದ ಪ್ರಕರಣ ದಾಖಲಾದ ಬಗ್ಗೆ ಗೊತ್ತಿರುತ್ತದೆ. ನಾನು ದಾಖಲೆಗಳನ್ನು ಪೋಲಿಸ ಠಾಣೆಯಲ್ಲಿ ಪರಿಶೀಲನೆ ಮಾಡಿದ್ದೇನೆ. 368 ಕಾಮಗಾರಿಗಳ ದಾಖಲಾತಿಗಳನ್ನು ಪರಿಶೀಲಿಸಲು ನನಗೆ Action Plan ನ್ನು ನೀಡಿದ್ದರು.ತನಿಖೆಗಾಗಿ ಪೋಲಿಸರು ನನ್ನ ನೇತೃತ್ವದಲ್ಲಿ ತಂಡ ರಚನೆ ಮಾಡಿಲ್ಲ. ಹಾಜರುಪಡಿಸಿದ 43 ಕಾಮಗಾರಿಗೆ ಸಂಬಂಧಿಸಿದ ಕಡತಗಳನ್ನು ಅಷ್ಟೇ ಪರಿಶೀಲಿಸಿದ್ದು ಬೇರೆ ಯಾವ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ . ಪೋಲಿಸರು ಜಪ್ತಿ ಪಡಿಸಿಕೊಂಡ ಎಲ್ಲಾ ದಾಖಲಾತಿಗಳ ಬಗ್ಗೆ ನನಗೆ ಗೊತ್ತಿಲ್ಲ. 5 ನೇ ಆರೋಪಿಗೆ MIS ಮೂಲಕ ಹಣ ಪಾವತಿ ಆಗಿರುವ ಬಗ್ಗೆ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ಸದರಿ ಆರೋಪಿತರ ಖಾತೆಗೆ ಹಣ ಪಾವತಿ ಆಗಿರುವ ಬಗ್ಗೆ ನಾನು ಪರಿಶೀಲಿಸಿಲ್ಲ. MIS ಮೂಲಕ ಪಾವತಿಯಾಗಿರುವ ಹಣ ಆರೋಪಿತರ ಖಾತೆಗೆ ವರ್ಗಾವಣೆ ಆಗಿದೇಯೋ ಇಲ್ಲಮೋ ಎನ್ನುವುದು ಹೇಳಲು ಆಗುವುದಿಲ್ಲ . MIS ನ್ನು ನೋಡಿ ಅವ್ಯವಹಾರವು ಆಗಿದೆ ಎಂದು ಹೇಳಬಹುದು. MIS ಗೆ ನಮೂದು ಮಾಡುವಾಗ ದಾಖಲೆಗಳು ಇದ್ದು , ಅವುಗಳನ್ನು ನಾನು ನೋಡಿಲ್ಲ. MIS ನೋಡಿ ಅವ್ಯವಹಾರ ಆಗಿದೆ ಎಂದು ಹೇಳಲಾಗುವುದಿಲ್ಲ ಎಂದರೆ ಸಾಕ್ಷಿಯು ಆಡಿಟ್ ಪ್ರಕಾರ ನಮ್ಮ ಆಕ್ಷೇಪಣೆ ಇದೆ ಎಂದು ವರದಿ ನೀಡಿರುತ್ತೇವೆ. ಯಾವ ಆರೋಪಿಗೆ ಎಷ್ಟು ಹಣ ಪಾವತಿ ಆಗಿದೆ ಎಂದರೆ ಸಾಕ್ಷಿಯು ನಾನು ಈ ಬಗ್ಗೆ ವರದಿ ನೀಡಿರುತ್ತೇನೆ ಎಂದು ನುಡಿಯುತ್ತಾರೆ . 43 ಕಾಮಗಾರಿಗಳು ನನಗೆ ಹೇಳಲಾಗುವುದಿಲ್ಲ ಆದರೆ ವರದಿ ನೀಡಿರುತ್ತೇನೆ .

ಫಾರಂ ನಂ.32 ನ್ನು ಜ್ಯೂನಿಯರ ಇಂಜನಿಯರ ಮತ್ತು ಪಿ.ಡಿ.ಓ. ರವರು ಸೇರಿ ಓಚರಗಳನ್ನು ನೋಡಿ ತಯ್ಯಾರಿಸುತ್ತಾರೆ. ಗ್ರಾಮ ಪಂಚಾಯತಿಯ ಅಧ್ಯಕ್ಷರು ಫಾರಂ ನಂ.32 ಕ್ಕೆ ಸಹಿ ಮಾಡುವ ಬಗ್ಗೆ ನನಗೆ ಗೊತ್ತಿಲ್ಲ. ಫಾರಂ ನಂ.32 ನ್ನು ಜ್ಯೂನಿಯರ ಇಂಜನಿಯರ ಮತ್ತು ಪಿ.ಡಿ.ಓ. ರವರು ಸೇರಿ ತಯ್ಯಾರಿಸಿದ ನಂತರ ಇ.ಓ. ತಾಲೂಕ ಪಂಚಾಯತಿ ರವರಿಗೆ ಕಳುಹಿಸಿ ನಂತರ ಅದನ್ನು ಇ.ಓ. ರವರು ಸಿ.ಓ. ಜಿಲ್ಲಾ ಪಂಚಾಯತ ರವರಿಗೆ ಕಳುಹಿಸಿ ನಂತರ ಅವರು ಕಮೀಷನರ ರವರಿಗೆ ಕಳಹಿಸಿರುತ್ತಾರೆ ಎಂದರೆ ಸರಿಯಲ್ಲ. ಏಜೆನ್ಸಿಗಳಿಗೆ ಹಣ ಸಂದಾಯ ಮಾಡುವ ಎಲ್ಲ ಹಂತಗಳ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುವುದಿಲ್ಲ.

ಹೆಬ್ಬಟ್ಟಿನ ಗುರುತುಗಳನ್ನು ನೋಡಿದರೆ ಒಂದೇ ಥರ ಆಗಿದೆ ಎಂದು ನನಗೆ ಅನಿಸುತ್ತದೆ. 22 ಹೆಬ್ಬಟ್ಟಿನ ಗುರುತುಗಳು ಒಂದೇ ಥರ NMR ನಲ್ಲಿ ಇದ್ದವು. ಕಾಮಗಾರಿಗೆ ಪಾವತಿಸಲಾದ ಹಣ ಸಾಮಾನ್ಯವಾಗಿ ಏಜೆನ್ಸಿಗಳಿಗೆ ಹೋಗಿರುತ್ತವೆ. Action Plan ನ್ನು ಇ.ಓ. ರವರು ಅನುಮೋದಿಸಿದ ನಂತರ ಸಿ.ಓ. ಜಿಲ್ಲಾ ಪಂಚಾಯತಿ ರವರು ಅನುಮೋದಿಸುತ್ತಾರೆ. 368 ಕಾಮಾಗಾರಿಗಳ Action Plan ನ್ನು ನೋಡಿ ನಾನು ವರದಿ ನೀಡಿರುತ್ತೇನೆ. ನಾನು ತಾಲೂಕ ಪಂಚಾಯತಿಗೆ 3-ಸಲಾ ನೋಟಿಸ ಕೊಟ್ಟು ಕಾಮಗಾರಿಗಳಿಗೆ ಸಂಬಂಧಪಟ್ಟ ಕಡತಗಳನ್ನು ಕೋರಿರುತ್ತೇನೆ. ಆದರೆ ಅವರು ಯಾವುದೇ ಕಡತವನ್ನು ಹಾಜರುಪಡಿಸಿಲ್ಲ. ತಾಲೂಕ ಪಂಚಾಯತಿಯ ಅಧಿಕಾರಿಗಳು ಆರೋಪಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. 153 ಕಾಮಗಾರಿಗಳಿಗೆ ಸಂಭಂದಿಸಿ ಯಾವ ಏಜೆನ್ಸಿಗೆ ಎಷ್ಟು ಹಣ ಪಾವತಿ ಆಗಿದೆ ಎಂಬುವುದನ್ನು ಹೇಳಲು ಆಗುವುದಿಲ್ಲ, ಆದರೆ ವರದಿ ನೋಡಿದರೆ ಹೇಳುತ್ತೇನೆ. ನಾನು MIS Statement ನ್ನು ನೋಡಿ ನನ್ನ ವರದಿಯನ್ನು ನೀಡಿರುತ್ತೇನೆ, ಆದರೆ ಆರೋಪಿತರ ಖಾತೆಗೆ ಜಮಾ ಆಗಿರುವ ಬಗ್ಗೆ ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ. ನಾನು MIS ವರದಿಯನ್ನು ನೋಡಿ ನನ್ನ ವರದಿಯನ್ನು ನೀಡಿರುತ್ತೇನೆ. 2013-14 ಮತ್ತು 2014-15 ನೇ ಇಸ್ವಿಯಲ್ಲಿ ಕಾಮಗಾರಿಗಳಿಗೆ ಕೂಲಿಗಾಗಿ ಆದ ಖರ್ಚು-ವೆಚ್ಚ ಸುಮಾರು ರೂ.43.62 ಲಕ್ಷ ಆಗಿರುತ್ತದೆ. ಸದರಿ ಹಣ ಯಾರ ಖಾತೆಗೆ ಹೋಗಿದ್ದೆ ಎಂದು ನನಗೆ ಗೊತ್ತಿಲ್ಲ. ಕಾಮಗಾರಿ ಸಾಮಾಗ್ರಿಗಳನ್ನು ಸರಬರಾಜು ಮಾಡುವ ವ್ಯಕ್ತಿಗಳು ಆದಾಯ ತೆರಿಗೆ, ಮಾರಾಟ ತೆರಿಗೆ ಹಾಗುಾ ರಾಯಲಟಿ ತೆರಿಗೆ ಕಟ್ಟಿರುವ ನನಗೆ ಹಾಜರುಪಡಿಸಿಲ್ಲ. ಸಿ.ಎಸ.ಟಿ. ಹಾಗೂ ಕೆ.ಎಸ.ಟಿ. ಜಿಲ್ಲಾ ಪಂಚಾಯತಿಯ ಖಾತೆಗೆ ಜಮಾ ಆಗುತ್ತದೆ ಎಂದರೆ ಸರಿಯಲ್ಲ. ನಿಪಿ-7 ರ ಬಗ್ಗೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಮುಂದೂವರೆ ಪಾಟೀ ಸವಾಲಿಗಾಗಿ ಸಮಯವಕಾಶ ಕೋರಿದ್ದರಿಂದ, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ